New Horizons of Dalit Culture and Literature

# ದಲಿತ ಸಂಸ್ಕೃತಿ ಮತ್ತು ಸಾಹಿತ್ಯ

[illegible]ಮಗಳು



ಪ್ರಧಾನ ಸಂಪಾದಕರು
ಡಾ.ಲೋಕೇಶ ಎಂ.ಯು

ಸಹ ಸಂಪಾದಕರು
ಪ್ರೊ.ಪರಶುರಾಮ ಕೆ.ಜಿ
ಪ್ರೊ.ನಿತ್ಯಾನಂದ ಬಿ. ಶೆಟ್ಟಿ
ಪ್ರೊ.ಎಸ್.ಎಸ್. ಗುಂಡೂರ್

# ದಲಿತ ಸಂಸ್ಕೃತಿ ಮತ್ತು ಸಾಹಿತ್ಯ: ಹೊಸ ಆಯಾಮಗಳು

## New Horizons of Dalit Culture and Literature


ಪ್ರಧಾನ ಸಂಪಾದಕರು

ಡಾ. ಲೋಕೇಶ ಎಂ.ಯು

ಸಹ ಸಂಪಾದಕರು

ಪ್ರೊ. ಪರಶುರಾಮ ಕೆ.ಜಿ

ಪ್ರೊ. ನಿತ್ಯಾನಂದ ಬಿ. ಶೆಟ್ಟಿ

ಪ್ರೊ. ಎನ್.ಎಸ್. ಗುಂಡೂರ್



Published by

**Suvvi Publications**

Gama-577214,Shikaripura

Shimoga District, Karnataka

Mob:9620083614

suvvibooks@gmail.com

First Impression : 2019

Pages : 224

Paper Used : 70 gsm NS

Book Size : ¼ Crown

ISBN : 978-81-939312-4-0



© : Author



Price : ₹ 800/-

DTP : Shwetha Ashwin

Cover Page : Arun Kumar G.

Printed at :

Ammaji Printers

Bangalore


* * *


This book is protected by copyright laws. No part of this book is to be reproduced, transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.

# ಪರಿವಿಡಿ


1. ದಲಿತ ಬಂಡಾಯ ಸಾಹಿತ್ಯದಲ್ಲಿ ಬಂಡಾಯದ ಧೋರಣೆಗಳು ಮತ್ತು
ದಲಿತ ಸಂವೇದನೆಗಳು – ಒಂದು ಅಧ್ಯಯನ
– ಶ್ರೀಮತಿ ಅನಿತಾ ಪಾಟೀಲ್. ಟಿ. ಹೆಚ್. ... ... 05

2. ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್–ಅಂಬೇಡ್ಕರ್ ತುಲನಾತ್ಮಕ ವಿಮರ್ಶೆ
–ಡಾ.ಬಿ.ಆರ್.ನಾಗರಾಜು ... ... 13

3. ದನಿ ಇಲ್ಲದ ದಲಿತ ಅಂಗವಿಕಲರ ಸಾಮಾಜಿಕ, ಶೈಕ್ಷಣಿಕ ಮತ್ತು
ಆರ್ಥಿಕ ಸ್ಥಿತಿಗತಿ ಕರ್ನಾಟಕದ ವರದಿ
–ಎಸ್.ಬಾಬು ... ... 19

4. ಸ್ವಾತಂತ್ರ ಹೋರಾಟದಲ್ಲಿ ದಲಿತವರ್ಗಗಳ ಪಾತ್ರ
– ಚಂದ್ರಶೇಖರ್.ಕೆ.ಎಸ್ ಮತ್ತು ಪ್ರೊ.ರಾಜು.ಎಲ್.ಪಿ ... ... 26

5. ದಡ್ಡಿಸೂರನಾಯಕ ಜಾತ್ರೆಯಲ್ಲಿ ಮ್ಯಾಸಬೇಡ ಬುಡಕಟ್ಟು ಮಹಿಳೆಯರ ಪಾತ್ರ
–ದೆಡ್ಡಯ್ಯ, ಜಿ. ಮತ್ತು ಡಾ. ಆಂಜನಪ್ಪ ಬಿ.ಹೆಚ್ ... ... 30

6. ಸಬಾಲ್ಟರ್ನ್ ಅಧ್ಯಯನ: ದಲಿತ ಚರಿತ್ರೆ ಮತ್ತು ಸಾಹಿತ್ಯ
– ಡಾ.ಚಿಕ್ಕಣ್ಣ ಮತ್ತು ಶ್ರೀಮತಿ ಜ್ಯೋತಿಲಕ್ಷ್ಮಿ .ಹೆಚ್. ... ... 36

7. ಕರ್ನಾಟಕದಲ್ಲಿ ದಲಿತ ಚಳುವಳಿಗಳು : ಒಂದು ಅವಲೋಕನ
– ಡಾ. ನರಸಿಂಹ, ಡಾ. ಗಣಪತಿ ಕೆ. ಲಮಾಣಿ,
ಮಹಾಂತೇಶ ಮಧೋಳ್, ಸುಮಿತ್ರ ಎಸ್. ವಿ. ... ... 43

8. ದಲಿತ ಮಹಿಳೆಯ ಅಸ್ಮಿತೆ : ಸಾಧ್ಯತೆ ಮತ್ತು ಸವಾಲುಗಳು
–ಅಂಬೇಡ್ಕರ್ ವಿಚಾರಧಾರೆಯ ಪುನರ್ ಚಿಂತನೆ
– ಡಾ.ರಾಜಶೇಖರ್ ಸಿ ಮತ್ತು ಡಾ.ರಮೇಶ್ ಬಿ ... ... 49

9. ಡಾ.ಅಂಬೇಡ್ಕರ್‌ರವರ ಚಿಂತನೆಯಲ್ಲಿ ಪ್ರಾಚೀನ ಭಾರತದ ಸಮಾಜ
–ಡಾ.ವೆಂಕಟೇಶ.ಟಿ.ಎಸ್. ಮತ್ತು ಪ್ರೊ.ರಾಜು.ಎಲ್.ಪಿ ... ... 53

10. ಕನ್ನಡ ಸಾಹಿತ್ಯದಲ್ಲಿ ದಲಿತ ಚಳುವಳಿಗಳು
– ನಯನಾ ಮಾರುತಿ ನಾಯ್ಕ ... ... 60

11. ಕರ್ನಾಟಕ ದಲಿತ ಚಳುವಳಿ ನಡೆದುಬಂದ ಹಾದಿ – ಒಂದು ಅವಲೋಕನ
–ಡಾ. ರಾಜಣ್ಣ.ಜಿ, ಬೀರಸಂದ್ರ ... ... 63

12. ದಲಿತರ ಆರ್ಥಿಕ ಸಬಲೀಕರಣ: ನೂತನ ಸಹಸ್ರಮಾನದ ವಿಶ್ಲೇಷಣೆ
–ಡಾ. ಡಿ. ಶ್ರೀನಿವಾಸ ... ... 70

1

# ದಲಿತ ಬಂಡಾಯ ಸಾಹಿತ್ಯದಲ್ಲಿ ಬಂಡಾಯದ ಧೋರಣೆಗಳು ಮತ್ತು ದಲಿತ ಸಂವೇದನೆಗಳು – ಒಂದು ಅಧ್ಯಯನ

**ಶ್ರೀಮತಿ ಅನಿತಾ ಪಾಟೀಲ್. ಟಿ. ಹೆಚ್.**
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಯಲಹಂಕ, ಬೆಂಗಳೂರು–64, ಮೊ: 7760623349

*"Past should be altered by the present as much as the present is directed by the past".*

*T. S. Elliot*

1970ರಲ್ಲಿ ಮಧ್ಯಮ ವರ್ಗದ ದಲಿತರು ಚಳುವಳಿಯನ್ನು ಪ್ರಾರಂಭಿಸಿ ತಮ್ಮ ಮೇಲಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸತೊಡಗಿದರು. ದಲಿತ ಚಳುವಳಿಯು ಒಂದು ಪ್ರಜ್ಞಾಪೂರ್ವಕ ಚಳುವಳಿಯಾಗಿದ್ದು, ಎಲ್ಲಾ ವರ್ಗದವರನ್ನು ಸೆಳೆದ ಸ್ವಾತಂತ್ರ್ಯ ನಂತರದ ದೊಡ್ಡ ಚಳುವಳಿ. ಅದು ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆಯ ವ್ಯವಸ್ಥೆಗಳ ವಿರುದ್ಧ ದಲಿತರನ್ನು ಸಂಘಟಿಸುತ್ತಾ ದಾರಿದ್ರ್ಯ, ಶೋಷಣೆ ಮತ್ತು ದಬ್ಬಾಳಿಕೆಯ ವಿರುದ್ಧ ದಲಿತರ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಒಂದು ಶಕ್ತಿಯಾಗಿದೆ. ದಲಿತ ಚಳುವಳಿಯು ದಲಿತ ಸಾಹಿತ್ಯದ ಮೇಲೆ ಪ್ರಭಾವ ಬೀರಿತು. ಕರ್ನಾಟಕದಲ್ಲಿ ದಲಿತ ಸಾಹಿತ್ಯವು ಭಾರತೀಯ ಭಾಷೆಗಳಲ್ಲಿ ಒಂದಾದ ಬಂಗಾಳಿ ಸಾಹಿತ್ಯದ ಪ್ರಭಾವಕ್ಕೊಳಗಾಯಿತು. ಬಂಕಿಮ್‌ಚಂದ್ರ ಚಟರ್ಜಿ ಮತ್ತು ಶರತ್‌ಚಂದ್ರ ಚಟ್ಟೋಪಾಧ್ಯಾಯರ ಕಾದಂಬರಿಗಳು ಹೊಸ ದೃಷ್ಟಿಕೋನ ಹಾಗೂ ಇತರೆ ಭಾಷೆಗಳ ಮೇಲೆ ಪ್ರಭಾವ ಬೀರುವಷ್ಟು ಸತ್ವಶಾಲಿಯಾಗಿದ್ದವು. ದಲಿತ ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಭಾಷೆಯ ಪ್ರಭಾವವೆಂದರೆ ಮರಾಠಿ ಭಾಷೆ. ಅನೇಕ ಮರಾಠಿಯ ಕೃತಿಗಳು ಹಾಗೂ ಮಹಾರಾಷ್ಟ್ರದ 'ಪ್ಯಾಂತರ್ ಚಳುವಳಿ' ಕನ್ನಡ ದಲಿತ ಸಾಹಿತ್ಯಕ್ಕೆ ಪ್ರೇರಣೆಯಾಗಿತ್ತು.

## ದಲಿತರು ಯಾರು?

ಜಿ. ಎಸ್. ಶಿವರುದ್ರಪ್ಪ 'ದಲಿತ' ಎಂಬ ಪರಿಕಲ್ಪನೆಯನ್ನು ಕುರಿತು ಮಾತನಾಡುವ ಬಹು ಮಂದಿ, ಎಲ್ಲಾ ವರ್ಗ, ಜಾತಿಗಳಲ್ಲಿಯೂ ಶೋಷಣೆ ಇದೆ ಹಾಗೇ ಶೋಷಣೆಗೆ ಒಳಗಾದವರೇ 'ದಲಿತರು'. ಇದು 'ದಲಿತ', 'ಶೋಷಿತ'

– ಈ ಎರಡಕ್ಕೂ ಸ್ವಲ್ಪ ವ್ಯತ್ಯಾಸವಿದೆ ಎಂಬುದನ್ನು ಗುರುತಿಸುವ ಅಗತ್ಯವಿದೆ. "ದಲಿತರು ಮಾತ್ರ ಶೋಷಿತರು ಆದರೆ ಶೋಷಿತರೆಲ್ಲರೂ ದಲಿತರಲ್ಲ". ದಲಿತರು ಕೇವಲ ಶೋಷಿತರಷ್ಟೇ ಅಲ್ಲ; ಅಮಾನವೀಯವಾದ ಹಿಂಸೆ, ಕ್ರೌರ್ಯಗಳಿಗೆ ಒಳಗಾದವರು. ಒಂದು ವ್ಯಕ್ತಿಯ ... ನಡೆಯಿಸಿಕೊಳ್ಳಲ್ಪಟ್ಟವರು'. ಡಾ॥ ಅರವಿಂದ ಮಾಲಗತ್ತಿ "ಶತಮಾನಗಳಿಂದ ಜನಸಮುದಾಯದ ... ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಬಿಟ್ಟಿ ಮತ್ತು ... ಜಮೀನಿಲ್ಲದ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ... ಅಸ್ಪೃಶ್ಯರು. ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ 'ದಲಿತ'ರೆನಿಸಿಕೊಳ್ಳುತ್ತಾರೆ".

ದಲಿತ ಸಾಹಿತ್ಯವು ಮೌಖಿಕ ಪರಂಪರೆಯಿಂದ ಪ್ರಾರಂಭಗೊಂಡಿದೆ. ಮಂಟೇಸ್ವಾಮಿ, ಮಲೆಮಾದೇಶ್ವರರ ಜನಪದ ಕಾವ್ಯಗಳು ದಲಿತರಿಗೆ ಪ್ರೇರಕವಾಗಿವೆ. ಮಂಟೇಸ್ವಾಮಿ ... ಕ್ಷೇಮಕಾತರನಾದ ಜಡ ಸಂಪ್ರದಾಯ ವಿರೋಧಿ ಕ್ರಾಂತಿಪುರುಷ. ಆಹಾರ ಪದ್ಧತಿಯಲ್ಲಿ ಪ್ರತಿಪಾದಿಸಿದ ... ಮಾಂಸಾಹಾರವನ್ನು ಮತ್ತು ಮದ್ಯವನ್ನು ಬಳಸುತ್ತಾರೆ. ಅವರ ಆಧ್ಯಾತ್ಮಿಕ ವಿಕಾಸದ ಕಡೆಗೆ ಗಮನ ... ಸಾಮಾಜಿಕ ತಾರತಮ್ಯಗಳನ್ನು ಹೋಗಲಾಡಿಸಿ ದಲಿತರಲ್ಲಿ ಆತ್ಮವಿಶ್ವಾಸವನ್ನು ತುಂಬಿಸುವುದೇ ... ಉದ್ದೇಶ. ದಲಿತರಿಗೆ ಶಕ್ತಿಯಾಗಿ, ಕತ್ತಲಲ್ಲಿದ್ದವರನ್ನು ಬೆಳಕಿಗೆ ತರುವುದೇ ಮಂಟೇಸ್ವಾಮಿ ... ಮಹದೇಶ್ವರ ಮತ್ತು ಮಂಟೇಸ್ವಾಮಿ, ಈ ಇಬ್ಬರು ದಲಿತ ಬಂಡಾಯ ಸಂಸ್ಕೃತಿಯ ಆದ್ಯ ಪ್ರವರ್ತಕರಾಗಿದ್ದಾರೆ ... ವ್ಯವಸ್ಥೆಯನ್ನು ಖಂಡಿಸುತ್ತಾರೆ. 'ಕೀಳು ಜಾತಿಯಲ್ಲಿ ಹುಟ್ಟಿದವ ಕೀಳಲ್ಲ, ಆದರೆ ಜಾತಿಯನ್ನು ಎತ್ತಿಹಿಡಿಯುವವ ... ಜಾತಿಯವ' ಎಂದು ಅಭಿಪ್ರಾಯ ಪಡುತ್ತಾರೆ.

ದಲಿತ ಸಾಹಿತ್ಯದ ಆದ್ಯ ಬರಹಗಾರರಲ್ಲಿ ದೇವನೂರು ಮಹಾದೇವ. ಅವರ 'ದ್ಯಾವನೂರು' ಕಥಾಸಂಕಲನ ಪ್ರಕಟಗೊಂಡಿದ್ದು 1973. ಇದು ದಲಿತ ಸಾಹಿತ್ಯದ ಮೊದಲ ದಾಖಲೆ. ಅವರ 'ಕುಸುಮ ಬಾಲೆ' ಮತ್ತೊಂದು ... ಸಾಹಿತ್ಯದ ಮೇರು ಕೃತಿ. ಆಧುನಿಕ ಪ್ರಯೋಗಾತ್ಮಕವಾದ ಕಥನವನ್ನು ರಚಿಸಿದ್ದಾರೆ. ಈ ಕೃತಿಯನ್ನು ಮಲೆಮಹದೇಶ್ವರರಿಗೆ ಅರ್ಪಿತವೆಂದು ಅವರ ಕುಲವಾದ 'ಮಾದಾರ' ಎಂದೇ ಹೆಸರಿಸಿದ್ದಾರೆ. ಜಾತಿ, ವರ್ಗ, ... ಎಲ್ಲವನ್ನೂ ಮೀರಿದ ದೈವವನ್ನು ಜಾತಿ ಸೂಚಕ ಪದದಿಂದ ಸಂಬೋಧಿಸಲಾಗಿದೆ. ಬಹುಪಾಲು ವ್ಯಕ್ತಿಗಳನ್ನು ... ಜಾತಿಯ ಆಧಾರದ ಮೇಲೆ ಕರೆಯಲಾಗಿದೆ. ಮಾನವಾತೀತ ಶಕ್ತಿಗಳಾಗಿರುವ "ಚೋತತಮ್ಮದೀರು" ... ಮಾದರಿಯಲ್ಲಿ ತಮ್ಮ ಹಟ್ಟಿಗಳಲ್ಲಿ ವರ್ಣಿತರಾಗಿದ್ದಾರೆ. ವರ್ಣಸಂಕರದ ಬಗ್ಗೆ ತಾಯಿ ಪಾತ್ರ ಸ್ಪಂದಿಸುವ ... 'ಕುಸುಮ ಬಾಲೆ' ಕೃತಿಯಲ್ಲಿ ಗಂಭೀರ ಧ್ವನಿಧಾಟಿಯಲ್ಲಿ ವರ್ಣಿಸಲಾಗಿದೆ. ಇದು ತನ್ನದೇ ಆದಂತಹ ... ಜಾತಿ ವ್ಯವಸ್ಥೆಯ ಬಗ್ಗೆ ಹಿಂಸೆ ಮತ್ತು ಅದಕ್ಕೆ ಬಲಿಯಾಗುವ ಮನುಷ್ಯ ವ್ಯಕ್ತಿಗಳ ಬಗ್ಗೆ ಅನುಕಂಪ ... ಅವಶ್ಯಕತೆ ಇದೆ. ಒಡಲಾಳದಂತಹ ಗಂಭೀರ ಶೈಲಿಯ ನಿರೂಪಣೆ, ಸಾಕವ್ವನ ಹಟ್ಟಿಯ ಸುತ್ತಲೂ ... ಬಗ್ಗೆ, ಅವರ ಕ್ರೌರ್ಯದ ಬಗ್ಗೆ ವಿಶ್ಲೇಷಣೆ ಇದ್ದೇ ಇರುತ್ತದೆ. ಮಹಾದೇವರವರ ಕೃತಿಗಳಲ್ಲಿ ದಲಿತ ... ಸತ್ಯಾಸತ್ಯತೆಗಳ ಬಗ್ಗೆ ಕೇಂದ್ರೀಕೃತವಾಗಿರುತ್ತದೆ. ಇಲ್ಲಿ ಪ್ರತಿಭಟನೆಗಿಂತ ಅಂತಃಕರಣ ಕೆಲಸ ಮಾಡುತ್ತದೆ ... ಮುಕ್ತಾಯವಾಗುವುದು ಸಹಜವಾಗಿ ಚರಮ ಗೀತೆಯೊಂದಿಗೆ. ವ್ಯವಸ್ಥೆಯೊಳಗಿನ ನೋವು ಮತ್ತು ಹಿಂಸೆಯನ್ನು ನುಂಗಿಕೊಂಡು ಅನುಭವವನ್ನು ಮೂರ್ತಗೊಳಿಸುವ ಪ್ರಕ್ರಿಯೆ ಮತ್ತು ಸಾರ್ವತ್ರಿಕಗೊಳಿಸುವ ಕ್ರಿಯೆ.

ಕನ್ನಡದ ದಲಿತ ಸಾಹಿತ್ಯದ ಮತ್ತೊಬ್ಬ ಕವಿ ಎಂದರೆ ಡಾ॥ ಸಿದ್ಧಲಿಂಗಯ್ಯ. ಅವರ 'ಹೊಲೆ ಮಾದಿಗರ ಹಾಡು' 1975ರಲ್ಲಿ ಪ್ರಕಟಗೊಂಡಿತು. ಇದು ಗಮನಾರ್ಹ ಕೃತಿ. ಶೋಷಿತರ ಬದುಕು ಸಾಹಿತ್ಯದಲ್ಲಿ ದಾಖಲಾಗಬೇಕು ... ಉದ್ದೇಶವನ್ನು ಪ್ರಚಾರ ಪಡಿಸಿದ್ದರು. ದಲಿತ ಸಾಹಿತ್ಯದಲ್ಲಿ ಆಕ್ರೋಶ, ಸಿಟ್ಟು ಸಹಜ ಎಂದು ಅವರ ಭಾವನೆ ... ಡಿ.ಎಸ್.ಎಸ್.ನಂತಹ ಸಾಹಿತಿಗಳು ಚಾರಿತ್ರಿಕ ನೆಲೆಯಲ್ಲಿ ಅರ್ಥೈಸಿದರು.

"ಎಲ್ಲಿದ್ದರೋ ಅವರು ಹೇಗಿದ್ದರೋ
ಎಚ್ಚೆತ್ತ ಸಿಂಹಗಳು ನನ್ನ ಜನಗಳು,

ಎಷ್ಟೋ ಲೋಕದ ಕನಸು ಕಾಣುತ್ತಿದ್ದರೋ ಅವರು,
ಎದ್ದ ಬಿರುಗಾಳಿಗಳು ನನ್ನ ಜನಗಳು"'.

ದಲಿತರಲ್ಲಿ ಜಾಗೃತಿಯನ್ನು ದಲಿತರು ಬರುವರು ಎಂಬ ಕೃತಿಯಲ್ಲಿ ಬೌದ್ಧಿಕ ಚೌಕಟ್ಟು ಮತ್ತು ಕಲಾತ್ಮಕ ಅಭಿವ್ಯಕ್ತಿಯ ನಡುವೆ ಸಾಮರಸ್ಯ ವ್ಯವಸ್ಥೆಯ ದಳ್ಳುರಿಗೆ ಸಿಲಿಕಿದವರಿಗೆ ನಲುಗಿದವರಿಗೆ ಶೋಷಿತರ ಬವಣೆಗಳನ್ನು ವ್ಯಕ್ತಪಡಿಸುತ್ತವೆ.

ಸಾಂಪ್ರದಾಯಿಕ ಭಾಷೆಯ ನಡೆಯನ್ನು ನಿರಾಕರಿಸಿ ಪದಪುಂಜಗಳನ್ನು ಹೊಸ ಭಾವನೆಗಳಿಗೆ ಮತ್ತು ವಿಶಿಷ್ಟ ಅರ್ಥವನ್ನು ಹೊರಹೊಮ್ಮಿಸುವಲ್ಲಿ ಭಾಷೆಯನ್ನು ದುಡಿಸಿಕೊಳ್ಳುತ್ತಾರೆ. ಹಾಗೂ ದಲಿತರ ಮೈಬಣ್ಣ, ತತ್ವಾರ ಎಂಬಂತೆ 'ಸಾವಿರಾರು ನದಿಗಳಲ್ಲಿ' ಅಭಿವ್ಯಕ್ತಿಗೊಳಿಸಿದ್ದಾರೆ. ಅರವಿಂದ ಮಾಲಗತ್ತಿ 'ಮೂಕನಿಗೆ ಬಾಯಿ ಬಂದಾಗ ಈ ದೇಶದ ಮಕ್ಕಳಾಗಿ ಹುಟ್ಟಿ ಮನುಷ್ಯ ಸಮಾನರಾಗಿ ಬದುಕಲಾಗುತ್ತಿಲ್ಲವೆಂಬ ನೋವಿದೆ. ಒಂದು ಸಮುದಾಯದ ಸುಪ್ತ ಪ್ರಜ್ಞೆಗಳು ಜಾಗೃತಗೊಂಡು ಸೃಜನಶೀಲತೆಯನ್ನು ಪಡೆಯುತ್ತವೆ. ಕುವೆಂಪುರವರ 'ಬೆರಳ್ಗೆ ಕೊರಳ್', ಶೂದ್ರ ತಪಸ್ವಿ' ಯಂತಹ ಕೃತಿಗಳು ಹೊಸ ಭಾಷ್ಯ ಬರೆದ.

ಬರಗೂರರ ಕವಿತೆ ಸಾಲಿನಲ್ಲಿ ಪಾಠ ಕೇಳುವ ಪ್ರಾಣಗಳು – 'ಬೆರಳು ಕೊಟ್ಟರೆ ಕರುಳು ಕೇಳುವ ಕಾಲ ಬಂತೇ ಈಗ, ಬೆರಳು ಕೊರಳುಗಳ ರಾಜಕೀಯದದಲ್ಲಿ ಬತ್ತಿ ಹೋಯಿತೇ ಈಗ'. ದಲಿತ ಬಂಡಾಯ ಸಾಹಿತ್ಯದ ಬರಹಗಾರರು ಮ.ನ.ಜವರಯ್ಯ, ಕೆ. ರಾಮಯ್ಯ, ಬಾನಂದೂರು ಕೆಂಪಯ್ಯ, ಸುಕನ್ಯ ಮಾರುತಿ ವಿಜಯದಬ್ಬೆ, ತಮ್ಮದೇ ಆದ ಕೃತಿಗಳ ಮೂಲಕ ದಲಿತ ಸಾಹಿತ್ಯಕ್ಕೆ ಕೊಡುಗೆಗಳನ್ನು ನೀಡಿದ್ದಾರೆ.

ಡಾ.ಶಿವರಾಮಕಾರಂತರಂತಹ ಸಾಹಿತಿಗಳೂ ಸಹ 'ಚೋಮನದುಡಿ' ಕಾದಂಬರಿಯಲ್ಲಿ ದಲಿತರ ಸಮಸ್ಯೆ ಮತ್ತು ಶೋಷಣೆಗಳನ್ನು ಸ್ವಾತಂತ್ರ್ಯಪೂರ್ವದಲ್ಲಿಯೇ ಚಿತ್ರಿಸಿದ್ದರು. ಕುವೆಂಪುರವರೂ ಸಹ ದಲಿತರ ಸಮಸ್ಯೆಯನ್ನು ಮಾನವ ಕಾಳಜಿಯಿಂದ ನೋಡಿದ್ದರು. ಜಾತಿಯ ಆಚರಣೆಗಳು ಹೇಗಿದ್ದವು ಎಂಬುದನ್ನು ಒಕ್ಕಲಿಗರಿಂದ ಅಸ್ಪೃಶ್ಯರ ತನಕ ಚಿತ್ರಿಸುತ್ತಾರೆ. ಯು. ಆರ್. ಅನಂತಮೂರ್ತಿ ಸಹ ದಲಿತ ಸಾಹಿತ್ಯವನ್ನು ಇನ್ನಷ್ಟು ವಿಸ್ತರಿಸುತ್ತಾರೆ. ದಲಿತರೆಂದರೆ ಅಸ್ಪೃಶ್ಯರಲ್ಲ, ಬ್ರಾಹ್ಮಣೇತರರೆಲ್ಲರೂ ಗುಲಾಮತನಕ್ಕೆ ಒಳಗಾಗಿದ್ದಾರೆ. ಮೊಗಳ್ಳಿ ಗಣೇಶ್, ದಲಿತ ಸಾಹಿತಿಯಾಗಿ 'ಭೂಮಿ', 'ಬುಗುರಿ'ಯಂತಹ ಕಥಾಸಂಕಲನಗಳಲ್ಲಿ ಸ್ಥಾಯಿಭಾವದ ಅಳಲು ಜಗತ್ತಿನ ವಾಸ್ತವದ ಗೀಳು. ಮಹತ್ವಾಕಾಂಕ್ಷೆಯುಳ್ಳ ಶ್ರೇಷ್ಠ ಕಥೆಗಾರರು. ಒಂದು ಕಡೆಗೆ ಕೇರಿಗಳನ್ನು ಸೃಷ್ಟಿ ಮಾಡುವ ಸಮಾಜ, ಚರಿತ್ರೆಯ ಜಾತಿ ವ್ಯವಸ್ಥೆ ಇತ್ಯಾದಿಗಳನ್ನು ನಿಚ್ಚಳವಾಗಿ ಅರ್ಥ ಮಾಡಿಕೊಂಡಿರುವ ನಿಶಿತ ಬುದ್ಧಿ ಇದೆ. ತಮ್ಮ ಆಘಾತಗಳನ್ನು ಬರೀ ಅಳಲಿನ ಮೂಲಕ ಅನುಭವಿಸುವ ದಲಿತ ಪ್ರಪಂಚದ ಬಗ್ಗೆ ಗಾಢವಾದ ಭಾವನೆಗಳಿಗೆ ಆತ್ಮ ವಿಮರ್ಶೆ, ತಳಮಳದ ನೋವುಗಳ ಬಗ್ಗೆ ಕಾಳಜಿ ಇದೆ. ಸಮಾಜದ ಅಸಮಾನತೆಯನ್ನು ವಿಕೃತಿಯಾಗಿ ನೋಡಬಾರದು, ಹಿಂಸೆಯಿಂದ ಸರಿಪಡಿಸಿಕೊಳ್ಳಬಾರದು ಎಂದು ಸಂವೇದನಾಶೀಲರಾಗಿ ಹೇಳಿದ್ದಾರೆ. ಅವರ ಕೃತಿಗಳಲ್ಲಿ ಗಟ್ಟಿತನದ ಹೆಣ್ಣು ಪಾತ್ರಗಳು ಇಂದಿನ ಜಗತ್ತಿನ ರಾಜಕೀಯದ ಪಾತ್ರದಿಂದ ತಳಮಳದಲ್ಲಿರುವ ಕೇರಿಯ ಬದುಕು ಚಿತ್ರಿತವಾಗಿದೆ. ವೈಚಾರಿಕ ಗದ್ಯದಲ್ಲಿ ಜಾಗತೀಕರಣದ ಚರ್ಚೆ, ಕೆಳಗೇರಿಯ ವಾಸ್ತವದ ಒಡಲು ಮತ್ತು ಮನುಷ್ಯ ಕುಲದ ಅಳಲನ್ನು ಶೋಧಿಸಲು ಪ್ರಯತ್ನಿಸುತ್ತಾರೆ.

ದಲಿತ ಸಾಹಿತ್ಯದಲ್ಲಿ 'Subaltern Studies' ಎಂಬ 11 ಗ್ರಂಥಗಳಲ್ಲಿ ಅಂಬೇಡ್ಕರ್‌ರವರ ಹೆಸರು ಇರುವುದಿಲ್ಲ. 'The Nation and its fragments' ಪುಸ್ತಕ ಬರೆಯುವಾಗ ಅದರಲ್ಲಿ ಅಂಬೇಡ್ಕರ್ ಇಲ್ಲವೇ ಇಲ್ಲ. ಬದಲಾಗಿ ಆರೋಗ್ಯಕರ ಪರ್ಯಾಯ ನೆಲೆಗಳನ್ನು ಸರಿಯಾಗಿಯೇ ಕೆಳಗಿನ ಕೇರಿಗಳಲ್ಲಿ ತೋರಿಸುತ್ತವೆ. ಮನುಷ್ಯತ್ವ ಯಾವ ಕೇರಿಯಲ್ಲಿತ್ತು ಎಂದು ನೆನಪು ಮಾಡಿಕೊಂಡು ಬರೆಯುತ್ತಾರೆ.

**ಉಪ ಸಂಹಾರ:** ದಲಿತ ಸಾಹಿತ್ಯ ಎಳೆಎಳೆಯಾಗಿ ಅನೇಕ ಪ್ರಕಾರಗಳ ಮೂಲಕ ನೈತಿಕ, ಸಾಮಾಜಿಕ, ಹಾಗೂ ವೈಚಾರಿಕತೆಯ ಮೂಲಕ ಜನಜಾಗೃತಿಯನ್ನು ಮೂಡಿಸುತ್ತಾ ಸಾಮಾಜಿಕ, ಧಾರ್ಮಿಕ, ಸೋಗಲಾಡಿತನಗಳನ್ನು ಖಂಡಿಸುತ್ತದೆ. ಜಡ ವೈಧಿಕ ಪರಂಪರೆಯ ವಿರೋಧಿಯಾಗಿ ಉತ್ಸವ, ಪೂಜೆ, ದೇವಾಲಯದ ಆದಾಯಕ್ಕಷ್ಟೇ ಅಲ್ಲದೇ

ಪೂಜಾರಿಯ ಆದಾಯ ಹೆಚ್ಚಿಸುವ ಹುನ್ನಾರ ಎಂಬ ಮಾತು ಅಕ್ಷರಶಃ ಸತ್ಯ. ಪ್ರಜ್ಞಾವಂತಿಕೆ ಮೌಲ್ಯಗಳಿಂದ ಎಲ್ಲಾ ವರ್ಗದವರನ್ನೂ ಗೌರವಿಸಿದಾಗ ಅವರ ಸಂವೇದನೆ ಮತ್ತು ಬಂಧಾಯದ ಭಾವನೆ ಬರುತ್ತದೆ.

**ಆಧಾರಗಳು ಮತ್ತು ಅಡಿಟಿಪ್ಪಣಿಗಳು:**

ಅಡಿಟಿಪ್ಪಣಿ 1: 'ದಲಿತ ಸಾಹಿತ್ಯ ಒಂದು ವಿವೇಚನೆ, ದಲಿತ ಸಾಹಿತ್ಯ ನೆಲೆ'. ಸಂ: ಡಾ। ಅರವಿಂದ ಮಾಲಗತ್ತಿ

ಅಡಿಟಿಪ್ಪಣಿ 2: ಡಾ। ಅರವಿಂದ ಮಾಲಗತ್ತಿ, 'ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ', ಪುಟ 7.

ಅಡಿಟಿಪ್ಪಣಿ 3: ಸಿದ್ಧಲಿಂಗಯ್ಯ 'ನನ್ನ ಜನಗಳು'. ಪುಟ 70.

**ಆಧಾರಗಳು:**


1. ಡಾ। ದೇ.ಜ.ಗೌ.ರವರ ಭಾಷಣಗಳು – ಡಾ। ಟಿ. ಕೆ. ಕೆಂಪೇಗೌಡ, ಸಾಗರ ಪ್ರಕಾಶನ–2002, ಬೆಂಗಳೂರು.
2. ಅಮೂರ್ತತೆ ಮತ್ತು ಪರಿಸರ – ಡಾ। ರಾಜೇಂದ್ರ ಚೆನ್ನಿ, ಅಭಿನವ ಪ್ರಕಾಶನ–2003, ಬೆಂಗಳೂರು.
3. ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆ – ಡಾ। ಚಂದ್ರಕಾಂತ್.ವಿ. ಚೌಹಾಣ್, ಶಿರಾ ಪಬ್ಲಿಶಿಂಗ್ ಹೌಸ್–2014, ಮೈಸೂ
4. ದಲಿತ ಸಾಹಿತ್ಯ ಒಂದು ವಿವೇಚನೆ, ದಲಿತ ಸಾಹಿತ್ಯ ನೆಲೆ ಹಿನ್ನೆಲೆ – ಶಿವರುದ್ರಪ್ಪ.ಜಿ.ಎಸ್– ಸಂ: ಡಾ। ಅರ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ.